ಕಾರ್ಯನಿರ್ವಹಿಸಬೇಕಾಗಿದ್ದು ನಿಯಮಗಳನ್ನು ಅನೇಕ ಕಾರಣಗಳಿಂದ ಅಳವಡಿಸಲಾಗಲಿಲ್ಲ. ಇಂಥ ಪರಿಸ್ಥಿತಿಯಲ್ಲಿ ಸಂಜೆ ಕಾಲೇಜುಗಳಲ್ಲಿ ಈ ನಿಯಮಗಳನ್ನು ಪರಿಪಾಲಿಸಲು ಸಾಧ್ಯವಾಗುವುದಿಲ್ಲ. ಸಂಜೆ ಕಾಲೇಜುಗಳಲ್ಲಿ ತರಗತಿಗಳು ಸಾಮಾನ್ಯವಾಗಿ 6 ರಿಂದ 8-30 ಅಥವಾ 9 ಗಂಟೆಗಳವರೆಗೆ ನಡೆಸುತ್ತಿದ್ದಾರೆ. ಇವರಿಂದ ಯಾವುದೇ ಸಂದರ್ಭದಲ್ಲಿ ವಾರಕ್ಕೆ 40 ಗಂಟೆಗಳ ಕಾರ್ಯಭಾರವನ್ನು ಪೂರೈಸುವುದಕ್ಕೆ ಸಾಧ್ಯವಾಗುವುದಿಲ್ಲ. ಮೇಲಿನ ಕಾರಣಗಳಿಂದಾಗಿ ಈಗಾಗಲೇ ವೇತನಾನುಧಾನಕ್ಕೆ ಒಳಪಟ್ಟಿರುವ ಸಂಜೆ ಕಾಲೇಜುಗಳಿಗೆ ನೀಡುತ್ತಿರುವ ವೇತನಾನುಧಾನ ಸವಲತ್ತುಗಳನ್ನು ಹಿಂದೆಗೆದುಕೊಳ್ಳಲು ಪರಿಶೀಲಿಸಲಾಗುತ್ತಿದೆ. ಅಂಥಾದ್ದರಲ್ಲಿ ಹೊಸ ಸಂಜೆ ಕಾಲೇಜುಗಳನ್ನು ವೇತನಾಧಾನಕ್ಕೆ ಒಳಪಡಿಸಲು ಸಾಧ್ಯವಾಗುವುದಿಲ್ಲ. ಹಾಗೂ ಇಂತ ಪ್ರಸ್ತಾವನೆಗಳನ್ನು ಯುಜಿಸಿ ನಿಯಮಗಳ ಪ್ರಕಾರ ಕಾನೂನಿಗೆ ವಿರುದ್ಧವಾಗಿರುತ್ತದೆ.

ಶ್ರೀ ಟಿ.ಬಿ. ಜಯಚಂದ್ರ (ಕಳ್ಳಂಬೆಳ್ಳ) :- ಮಾನ್ಯ ಅಧ್ಯಕ್ಷರೇ, ಇವರು ಕೊಡುತ್ತಾ ಇರತಕ್ಕಂಥ ಅನುದಾನವನ್ನು ಕೂಡ ವಾಪಸ್ ತೆಗೆದುಕೊಳ್ಳುವ ಬಗ್ಗೆ ಪರಿಶೀಲನೆ ಮಾಡುತ್ತೇವೆ ಅಂದರೆ ಅದನ್ನೂ ನಿಲ್ಲಿಸಿ. ಪರಿಶೀಲನೆ ಮಾಡಬೇಕಾದರೆ ಎಲ್ಲವನ್ನೂ ಒಟ್ಟಿಗೆ ಮಾಡಿ.....

ಅಧ್ಯಕ್ಷರು:- ಜಯಚಂದ್ರರವರೇ, you can bring it by some other way. If you start from the first bench, it becomes a precedent. Kindly bring it in some other from. ದಯಮಾಡಿ ಸಹಕರಿಸಿ.

(ಆ) ಪುರಸಭೆಗಳ ಅಧ್ಯಕ್ಷರಿಗೆ ಅವಧಿ

ಶ್ರೀ ಜೆ.ಸಿ. ಮಾಧುಸ್ವಾಮಿ (ಚಿಕ್ಕನಾಯಕನ ಹಳ್ಳಿ):- ಮಾನ್ಯ ಅಧ್ಯಕ್ಷರೇ, ಸ್ಥಳೀಯ ಸಂಸ್ಥೆಗಳ ಆಫೀಸ್ ಬೇರರ್ಸ್‌ನ್ನು ಚುನಾವಣೆ ಮಾಡತಕ್ಕಂಥ ಕಾಲದಲ್ಲಿ ಮೀಸಲಾತಿ ಪದ್ಧತಿಯನ್ನು ಅನುಕರಣೆ ಮಾಡಿದ್ದೇವೆ. ತಾಲ್ಲೂಕು ಪಂಚಾಯಿತಿ, ಜಿಲ್ಲಾ ಪಂಚಾಯಿತಿಯಗಳಲ್ಲಿ ಈ ನಿಯಮವನ್ನು ಮಾಡಿದ್ದೇವೆ. ಈ ರೀತಿಯಲ್ಲಿ ಪುರಸಭೆಗಳಲ್ಲಿಯೂ ಮಾಡಿದಾಗ ಬಹುಶಃ ಅವರಿಗೂ ಅವಧಿಯನ್ನು ನಿಗಧಿ ಮಾಡುತ್ತಾರೆ ಎಂದು ನಾವು ಭಾವಿಸಿದ್ದೆವು. ಜಿಲ್ಲಾ ಪಂಚಾಯತ್, ತಾಲ್ಲೂಕು ಪಂಚಾಯತ್‌ಗಳಲ್ಲಿ 20 ತಿಂಗಳು ಮತ್ತು ಮೇಯರ್‌ಗಳಿಗೆ ಒಂದು ವರ್ಷ ಎಂದು ಅವಧಿ ನಿಗಧಿ ಆಗಿದೆ. ಆದರೆ ಇಲ್ಲಿಯವರೆಗೆ ಪುರಸಭಾಧ್ಯಕ್ಷರಿಗೆ ಅವಧಿಯನ್ನು ನಿಗದಿ ಮಾಡಿದ್ದಾರೋ ಇಲ್ಲವೋ ಎಂಬ ಬಗ್ಗೆ ಪ್ರಕಟಣೆಯೂ ಆಗಿಲ್ಲ. ಪುರಸಭಾ ಅಧ್ಯಕ್ಷರುಗಳೂ ಕೂಡ ಮೀಸಲಾತಿ ಪ್ರಕಾರವೇ ಅಧ್ಯಕ್ಷರಾಗಿರುವುದರಿಂದ ಬೇರೆ ಸಮೂಹಗಳಿಗೂ ಕೂಡ ಅವಕಾಶವನ್ನು ತಾವುಗಳು ಕೊಡಲಿಚ್ಚಿಸುತ್ತೀರಾ ಎಂಬುದನ್ನು ಕೇಳಿ ಬಯಸುತ್ತೇನೆ. ಹಾಗೂ ಅವಧಿ ನಿಗಧಿಪಡಿಸುವುದಿಲ್ಲವಾದಲ್ಲಿ ಅವರೇ ಮುಂದುವರಿದುಕೊಂಡುಹೋಗ ಬಹುದೇ ಎಂಬ ಬಗ್ಗೆ ಒಂದು ನಿರ್ದಿಷ್ಟ ಉತ್ತರವನ್ನು ಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಎಂ.ಸಿ. ನಾಣಯ್ಯ :- ಮಾನ್ಯ ಸಭಾದ್ಯಕ್ಷರೇ, ಮೀಸಲಾತಿಗೆ ಸಂಬಂಧಪಟ್ಟ ಹಾಗೆ ನಾವು ಕಾನೂನಿನ ಅಡಿಯಲ್ಲಿ ಇದನ್ನು ಕಮಿಷನರ್‌ರವರಿಗೆ ವಹಿಸಿದ್ದೇವೆ. ಈ ಪ್ರಕ್ರಿಯೆಯನ್ನು ಬಹುಶ: ಅವರು ಶುರು ಮಾಡಬೇಕಾಗುತ್ತದೆ.

ಶ್ರೀ ಜೆ.ಸಿ. ಮಾಧುಸ್ವಾಮಿ :- ಪುರಸಭಾ ಅಧ್ಯಕ್ಷರ ಅವಧಿ ಎಷ್ಟು ಇದುವರೆಗೂ ನಿಗಧಿಯಾಗಿಲ್ಲ. ನಾನು ಅದನ್ನು ಕೇಳುತ್ತಾ ಇದ್ದೇನೆ. ಮೀಸಲಾತಿಯನ್ನು ತಾವುಗಳು ಮಾಡಿ. ಜಿಲ್ಲಾಪಂಚಾಯತ್, ತಾಲ್ಲೂಕು ಪಂಚಾಯತ್ 20 ತಿಂಗಳು, ಮೇಯರ್ ಒಂದು ವರ್ಷ ಎಂದು ಮಾಡಿದ್ದೀರಿ. ಹಾಗೆಯೇ ಪುರಸಭಾ ಅಧ್ಯಕ್ಷರ ಅವಧಿ ಎಷ್ಟು ಎಂದು ಮಾಡಿ.

ಶ್ರೀ ಎಂ.ಸಿ. ನಾಣಯ್ಯ :- 30 ತಿಂಗಳು ಎಂದು ಈಗಾಗಲೇ ಹೇಳಿದ್ದೇವಲ್ಲಾ? ಅಂದರೆ ಎರಡೂವರೆ ವರ್ಷ. ಅಧ್ಯಕ್ಷರು ಮತ್ತು ಉಪಾಧ್ಯಕ್ಷರ ಅವಧಿಯನ್ನು ಎರಡೂವರೆ ವರ್ಷ ಎಂದು ನಿಗಧಿ ಮಾಡಿದ್ದೇವೆ. ಈ ಅವಧಿ ಮುಗಿದ ಮೇಲೆ ಪುನ: ಹೊಸದಾಗಿ ಇರತಕ್ಕಂಥ ಮೀಸಲಾತಿಯು ಬರುತ್ತದೆ. ಅಲ್ಲಿ ಬಾಕಿ ಇರತಕ್ಕಂಥವರು ಪ್ರಸಕ್ತ ಅವಧಿ ಮುಗಿದ ಮೇಲೆ ಬರುತ್ತಾರೆ.

ದಕ್ಷಿಣ ಕನ್ನಡ ಜಿಲ್ಲಾ ಪಂಚಾಯತ್‌ನಿಂದ ಅಂದಾಜು ಪಟ್ಟಿಗಳಿಗೆ ಮಂಜೂರಾತಿಯಲ್ಲಿ ವಿಳಂಬ

ಶ್ರೀ ಡಿ.ವಿ. ಸದಾನಂದ ಗೌಡ (ಪುತ್ತೂರು):- ಮಾನ್ಯ ಅಧ್ಯಕ್ಷರೇ, ಈ ವಿಚಾರವು ಕೇವಲ ದ.ಕ. ಜಿಲ್ಲೆಗೆ ಮಾತ್ರವಲ್ಲ, ರಾಜ್ಯದ ಇತರ ಜಿಲ್ಲೆಗಳಿಗೂ ಅನ್ವಯವಾಗುತ್ತದೆ. ಇದು ರಾಜ್ಯದ ಜಿಲ್ಲಾ ಪಂಚಾಯತ್‌ಗಳಲ್ಲಿರುವ ಕರ್ಮಕಾಂಡ ಎಂದು ನಾನು ಭಾವಿಸುತ್ತೇನೆ. ದ.ಕ. ಜಿಲ್ಲಾ ಪಂಚಾಯತ್‌ನಲ್ಲಿ ಸುಮಾರು 200 ರಷ್ಟು ಅಂದಾಜು ಪಟ್ಟಿಗಳು ಆಡಳಿತಾತ್ಮಕ ಮಂಜೂರಾತಿಗೆ ಆರ್ಥಿಕ ವರ್ಷವು ಅಂತ್ಯವಾಗುತ್ತಿದ್ದರೂ ಕೂಡ ಇನ್ನೂ ಬಾಕಿ ಇವೆ. ಅಲ್ಲಿನ ಜಿಲ್ಲಾ ಪಂಚಾಯತ್‌ಗೆ ಮುಖ್ಯ ಕಾರ್ಯದರ್ಶಿ ಇಲ್ಲ. ಅಲ್ಲಿರುವ ಡಿಸಿಯವರು ಮಂಗಳೂರು ಮತ್ತು ಉಡುಪಿ ಜಿಲ್ಲೆಗಳಿಗೆ ಒಬ್ಬರೇ ಡಿಸಿ ಆಗಿದ್ದಾರೆ. ಮಂಗಳೂರು ಮತ್ತು ಉಡುಪಿ ಜಿಲ್ಲಾಪಂಚಾಯತ್‌ಗೂ ಅವರೇ ಮುಖ್ಯಕಾರ್ಯದರ್ಶಿ. ಹೀಗಾಗಿ ಯಾವುದೇ ಆಡಳಿತಾತ್ಮಕ ಮಂಜುರಾತಿಗಳು ಆಗುತ್ತಾ ಇಲ್ಲ. ಈಗ ಮಾರ್ಚ ತಿಂಗಳ ಕೊನೆಯ ಹಂತಕ್ಕೆ ಬರತಕ್ಕಂಥ ಅವಧಿಯಲ್ಲಿ ಏನಾಗಿದೆ ಅಂದರೆ ಅಲ್ಲಿರುವಂಥ ಡಿ ಎಸ್ ಯಾರಿದ್ದಾರೋ ಅವರು ಎಲ್ಲಾ ಕಡತಗಳನ್ನು ಮೇಜಿನ ಮೇಲಿಟ್ಟು ಅಲ್ಲಿಗೆ ಒಂದೋ ಕಂಟ್ರಾಕ್ಟರ್‌ಗಳು ಬರಬೇಕು, ಇಲ್ಲವೇ ಇಂಜಿನೀಯರ್‌ಗಳು ಬರಬೇಕು ವಿಸ 20-3-96 (6ಬಿ)

ಹೀಗೆ ಇವರು ಬಂದರೆ ಮಾತ್ರ ಆಡಳಿತಾತ್ಮಕ ಮಂಜೂರಾತಿಯನ್ನು ಕೊಡುವಂಥ ಒಂದು ರೀತಿಯ ಭ್ರಷ್ಟಾಚಾರದ ತಾಂಡವಾರು ಬಹುತ: ದ.ಕ. ಜಿಲ್ಲೆ ಮಾತ್ರವಲ್ಲ ರಾಜ್ಯದ ಬಹುತೇಕ ಜಿಲ್ಲಾಪಂಚಾಯತ್‌ಗಳಲ್ಲಿ ಇರಬಹುದು. ನಾನು ಸರಕಾರವನ್ನು ವಿನಂತಿ ಮಾಡಿಕೊಳ್ಳುವುದೇನೆಂದರೆ ತತ್‌ಕ್ಷಣ ಇದಕ್ಕೆ ಆಡಳಿತಾತ್ಮಕ ಮಂಜೂರಾತಿಯನ್ನು ಕೊಡಬೇಕು, ಹಾಗೆಯೇ ಕಾಮಗಾರಿಗಳನ್ನು ಮಾರ್ಚ್ 31ಕ್ಕೆ ಮುಗಿಸುವುದಕ್ಕಾಗುವುದಿಲ್ಲ. ಅದಕ್ಕೋಸ್ಕರ ಒಂದು ತಿಂಗಳ ಕಾಲ ಅವಧಿ ವಿಸ್ತರಿಸಬೇಕು ಎಂದು ಕೋರುತ್ತೇನೆ.

ಶ್ರೀ ಎಂ.ಸಿ. ನಾಣಯ್ಯ :- ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರು ಹೇಳಿದ್ದು ನಿಜ. ಕೆಲವು ಅಧಿಕಾರಿಗಳನ್ನು ವರ್ಗಾವಣೆ ಮಾಡಬೇಕಾಗುತ್ತದೆ. ಆ ಒಂದು ಪ್ರಕ್ರಿಯೆಯನ್ನು ನಾವು ಏಪ್ರಿಲ್‌ನಲ್ಲಿ ಶುರು ಮಾಡುತ್ತೇನೆ. ಈಗ ಮಾರ್ಚ್ 31ರೊಳಗೆ ಆಡಳಿತಾತ್ಮಕವಾಗಿ ಕೊಡತಕ್ಕಂಥ ಮಂಜೂರಾತಿಯನ್ನು ಕೊಡುವುದು ಬಾಕಿ ಇದೆ ಎಂದು ತಾವು ಹೇಳುತ್ತಿದ್ದೀರಿ. ಈಗಲೇ ಅಲ್ಲಿನ ಡಿಸಿಯವರು ಯಾರಿದ್ದಾರೆ, ಯಾರು ಈ ವ್ಯವಸ್ಥಾಪಕರ ಹುದ್ದೆಯನ್ನು ಮಾಡುತ್ತಾ ಇದ್ದಾರೆ. ಅವರಿಗೆ ಸರಕಾರದ ಮುಖಾಂತರ ಆದೇಶವನ್ನು ಹೊಟ್ಟು ಆಡಳಿತಾತ್ಮಕ ಮಂಜೂರಾತಿಯನ್ನು ಕೊಡಲು ಆದೇಶವನ್ನು ಕೊಡುತ್ತೇವೆ.